10.	ಬಿಜಾಪುರ	34	4	2	23	18642
11.	ಚಿತ್ರದುರ್ಗ	7	-	-	6	2715
	ಒಟ್ಟು	347	17	83	175	63814

ರಾಜ್ಯ ಸರ್ಕಾರ ದಿನಾಂಕ 8.6.1994ರಿಂದ 23.8.1994ರವರೆಗೆ ಪ್ರವಾಹ ಪರಿಸ್ಥಿತಿಯನ್ನು ಎದುರಿಸಲು ಕೆಳಕಂಡ ಜಿಲ್ಲೆಗಳಿಗೆ ರೂ. 1015.00 ಲಕ್ಷಗಳನ್ನು ಬಿಡುಗಡೆ ಮಾಡಿದೆ.

	ಜಿಲ್ಲೆಯ ಹೆಸರು	ರೂ. ಲಕ್ಷಗಳಲ್ಲಿ
1.	ದಕ್ಷಿಣ ಕನ್ನಡ	160.00
2.	ಉತ್ತರ ಕನ್ನಡ	80.00
3.	ಕೊಡಗು	70.00
4.	ಶಿವಮೊಗ್ಗ	80.00
5.	ಮೈಸೂರು	40.00
6.	ಚಿಕ್ಕಮಗಳೂರು	95.00
7.	ಹಾಸನ	60.00
8.	ಬಿಜಾಪುರ	25.00
9.	ತುಮಕೂರು	5.00
10.	ಕೋಲಾರ	10.00
11.	ಬೆಳಗಾವಿ	80.00
12.	ಧಾರವಾಡ	285.00
13.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ಆರೋಗ್ಯ ರಕ್ಷಣೆಗೆ	25.00
	ಒಟ್ಟು	1015.00

ಮುಂಗಾರಿನಿಂದ ರಾಜ್ಯದಲ್ಲಿ ಉಂಟಾದ ಪರಿಸ್ಥಿತಿಯ ವೀಕ್ಷಣೆಗಾಗಿ ಮಾನ್ಯ ಪ್ರಧಾನ ಮಂತ್ರಿಗಳು ಮಾನ್ಯ ರಕ್ಷಣಾ ಖಾತೆ ರಾಜ್ಯ ಸಚಿವರಾದ ಶ್ರೀ ಮಲ್ಲಿಕಾರ್ಜುನರವನ್ನು ವೈಯಕ್ತಿಕ ಪ್ರತಿನಿಧಿಯಾಗಿ ಕಳುಹಿಸಿದ್ದು; ಶ್ರೀ ಮಲ್ಲಿಕಾರ್ಜುನ್‌ರವರು ದಿನಾಂಕ ೨೦ ಮತ್ತು 21ನೇ ಜುಲೈ, 1994ರಂದು ಮಾನ್ಯ ಮುಖ್ಯಮಂತ್ರಿಯವರು, ನಾನು ಮತ್ತು ಅಧಿಕಾರಿಗಳೊಂದಿಗೆ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡಿರುತ್ತಾರೆ. 1994ರ ಜುಲೈ 24ರ ಸಂಜೆ, ಶ್ರೀ ಮಲ್ಲಿಕಾರ್ಜುನ್‌ರವರು ಬೆಂಗಳೂರಿನಲ್ಲಿ ಸಭೆಯೊಂದನ್ನು ಇಟ್ಟುಕೊಂಡಿದ್ದರು. ಶ್ರೀ ಸಿ.ಕೆ. ಜಾಫರ್ ಶರೀಫ್, ಮಾನ್ಯ ಕೇಂದ್ರ ರೈಲ್ವೆ ಮಂತ್ರಿಗಳೂ ಸಹ ಈ ಸಭೆಯಲ್ಲಿ ಹಾಜರಿದ್ದರು.

ರಾಜ್ಯ ಸರ್ಕಾರ ಶ್ರೀ ಮಲ್ಲಿಕಾರ್ಜುನ್‌ರವರಿಗೆ ಭಾರಿ ಮಳೆ : ಪ್ರವಾಹದಿಂದ ಆದ ಹಾನಿಯ ಬಗ್ಗೆ ವರದಿಯನ್ನು ಸಲ್ಲಿಸಿತು. ಇದರ ಹಿಂದೆಯೇ, ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಪ್ರಧಾನ ಮಂತ್ರಿಯವರಿಗೆ, ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ರೂ. 100.00 ಕೋಟಿಗಳ ಕೇಂದ್ರದ ನೆರವು ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ.

2. ಬರ ಪರಿಸ್ಥಿತಿ :

ರಾಜ್ಯದ 12 ಜಿಲ್ಲೆಗಳಲ್ಲಿನ 72 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿಯ ಛಾಯೆ ಕಂಡು ಬಂದಿದೆ. ಜಿಲ್ಲೆಯ ಕೆಲವು ಭಾಗ ಭಾರಿ ಮಳೆ : ಪ್ರವಾಹವನ್ನು ಕಂಡಿದ್ದರೆ, ಅದೆ ಜಿಲ್ಲೆಯ ಉಳಿದ ಕೆಲವು ಭಾಗ ಬರದ ಸ್ಥಿತಿಯಲ್ಲಿರುವುದು ಒಂದು ವಿರೋಧಾಭಾಸವಾಗಿದೆ.

ಬಹಳಷ್ಟು ಅಭಾವ ಪೀಡಿತ ತಾಲ್ಲೂಕುಗಳಲ್ಲಿ ಜೂನ್ - 1994ರ ಮುಂಗಾರು ಮಳೆಯ ಪ್ರಾರಂಭದಿಂದಲೂ ದೀರ್ಘ ಒಣ ಹವೆಯಿದೆ.

ಬೆಂಗಳೂರು (ಗ್ರಾಮಾಂತರ), ಬಳ್ಳಾರಿ, ಬೀದರ್ ಬಿಜಾಪುರ, ಚಿತ್ರದುರ್ಗ, ಧಾರವಾಡ, ಗುಲ್ಬರ್ಗಾ, ಕೋಲಾರ, ಮಂಡ್ಯ, ರಾಯಚೂರು ಮತ್ತು ತುಮಕೂರು ಜಿಲ್ಲೆಗಳ ಬಹಳಷ್ಟು ತಾಲ್ಲೂಕುಗಳಲ್ಲಿ ದೀರ್ಘ ಒಣಹವೆಯಿಂದಾಗಿ ಖಾರೀಫ್ ಬೆಳೆಯ ಬಿತ್ತನೆ ಕುಂಠಿತವಾಗಿರುತ್ತದೆ.

ಅಭಾವ ಪೀಡಿತ 72 ತಾಲ್ಲೂಕುಗಳ ಸಾಮಾನ್ಯ ಬಿತ್ತನೆ ಕ್ಷೇತ್ರವಾದ 43.28 ಲಕ್ಷ ಹೆಕ್ಟೇರ್ ಪ್ರದೇಶಗಳ ಪೈಕಿ, ಕೇವಲ 24.76 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ. ಮಳೆಯ ಕೊರತೆಯಿಂದಾಗಿ ಬಹಳಷ್ಟು ಪ್ರದೇಶಗಳಲ್ಲಿ ಬಿತ್ತನೆ ಕಾರ್ಯ ನಡೆದಿರುವುದಿಲ್ಲ. ಒಟ್ಟಾರೆ ಶೇಕಡಾ 57.21 ಭಾಗಗಳಲ್ಲಿ ಬಿತ್ತನೆಯಾಗಿರುತ್ತದೆ. ಅಲ್ಲದೇ, ಬಿತ್ತಿರುವ ಕ್ಷೇತ್ರಗಳ ಪೈಕಿಯೂ 8.68 ಲಕ್ಷ ಹೆಕ್ಟೇರ್ ಪ್ರದೇಶ ತೊಂದರೆಗೊಳಗಾಗಿದ್ದು; ಹಾನಿಯ ಪ್ರಮಾಣ ಶೇಕಡಾ 35.06 ಆಗಿರುತ್ತದೆ. ಮಳೆಯ ಅಭಾವದಿಂದ ಬೆಂಗಳೂರು (ಗ್ರಾ), ಬಿಜಾಪುರ, ಗುಲ್ಬರ್ಗಾ, ಕೋಲಾರ, ರಾಯಚೂರು ಮತ್ತು ತುಮಕೂರು ಜಿಲ್ಲೆಗಳ ಕೆಲವು ತಾಲ್ಲೂಕುಗಳಲ್ಲಿ ಬೆಳೆ ಒಣಗುತ್ತಿದೆ. ಬಾಧಿತ ಬಿತ್ತನೆ ಕ್ಷೇತ್ರ ಹಾಗೂ ಬಿತ್ತದಿರುವ ಪ್ರದೇಶಗಳೆರಡೂ ಸೇರಿದಲ್ಲಿ, ಒಟ್ಟಾರೆ 27.20 ಲಕ್ಷ ಹೆಕ್ಟೇರ್‌ಗಳು ಬಾಧಿತವಾಗಿದ್ದು, ಶೇಕಡಾವಾರು 62.85 ಪ್ರಮಾಣವಾಗಿರುತ್ತದೆ. ರೂ. 205.97 ಕೋಟಿಗಳಷ್ಟು ಹಾನಿಯಾಗಿರುವುದಾಗಿ ಅಂದಾಜಿಸಲಾಗಿದೆ.

ಬೆಂಗಳೂರು (ಗ್ರಾಮಾಂತರ), ಬಳ್ಳಾರಿ, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ಕೆಲವು ತಾಲ್ಲೂಕುಗಳಲ್ಲಿ ಸತತವಾಗಿ ಮಳೆ ಬಾರದಿರುವುದರಿಂದ ಹಾಗೂ ಭೂಮಿಯ ಮೇಲ್ಭಾಗದ ಮತ್ತು ಒಳಭಾಗದ ನೀರಿನ ನೆಲೆ ಕಡಿಮೆಯಾಗಿರುವುದರಿಂದ, ಕುಡಿಯುವ ನೀರು ದೊರಕುವುದು ದುರ್ಬಲವಾಗುತ್ತಿದೆ.

ಪ್ರಬಲವಾಗುತ್ತಿರುವ ಬರದ ಪರಿಸ್ಥಿತಿಯಿಂದ 22.64 ಲಕ್ಷ ಜಾನುವಾರುಗಳು ತೊಂದರೆಗೊಳಗಾಗಿವೆ. ಪ್ರಚಲಿತ ಜಾರಿಯಲ್ಲಿರುವ ಉದ್ಯೋಗ ಸೃಜಿಸುವ ಕಾರ್ಯಕ್ರಮಗಳಾದ ಜವಹಾರ್ ರೋಜಗಾರ್ ಯೋಜನೆ, ಎನ್‌ಆರ್‌ವೈ, ಡಿಪಿಎಪಿ; ಇತರೆ ಕಾಮಗಾರಿಗಳನ್ನು ತ್ವರಿತ ಗೊಳಿಸಲಾಗಿದೆ. ಉದ್ಯೋಗವಿಲ್ಲದ ಎಲ್ಲಾ ಕೃಷಿ ಕಾರ್ಮಿಕರನ್ನು ಈ ಯೋಜನೆಗಳಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಿಲ್ಲದಿದ್ದಲ್ಲಿ, ಜಿಲ್ಲಾಧಿಕಾರಿಗಳು ಪ್ರಕೃತಿ ವಿಕೋಪ ಪರಿಹಾರ ನಿಧಿ ಅಡಿಯಲ್ಲಿ ಉದ್ಯೋಗ ಸೃಜನೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಿದ್ದಾರೆ. ಈ ನಿಟ್ಟಿನಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ಕಾರ್ಯಯೋಜನೆಯನ್ನು ತಯಾರಿಸಲಾಗಿದೆ.

ಬರ ಪರಿಹಾರ ಕಾರ್ಯಗಳಿಗಾಗಿ ದಿನಾಂಕ 1.4.1994ರಿಂದ 23.8.1994ರವರೆಗೆ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಿದೆ

	ಜಿಲ್ಲೆಯ ಹೆಸರು	ರೂ. ಲಕ್ಷಗಳಲ್ಲಿ
1.	ಬೆಂಗಳೂರು (ನಗರ)	10.00
2.	ಬೆಂಗಳೂರು (ಗ್ರಾಮಾಂತರ)	20.00
3.	ಕೋಲಾರ	35.00
4.	ತುಮಕೂರು	45.00
5.	ಚಿತ್ರದುರ್ಗ	15.00
6.	ಶಿವಮೊಗ್ಗ	15.00
7.	ಮೈಸೂರು	30.00
8.	ಮಂಡ್ಯ	15.00
9.	ಚಿಕ್ಕಮಗಳೂರು	15.00

10.	ಹಾಸನ	25.00
11.	ಕೊಡಗು	5.00
12.	ದಕ್ಷಿಣ ಕನ್ನಡ	20.00
13.	ಗುಲ್ಬರ್ಗಾ	85.00
14.	ಬೀದರ್	70.00
15.	ರಾಯಚೂರು	85.00
16.	ಬಳ್ಳಾರಿ	50.00
17.	ಬೆಳಗಾವಿ	50.00
18.	ಬಿಜಾಪುರ	80.00
19.	ಉತ್ತರ ಕನ್ನಡ	10.00
	ಒಟ್ಟು	680.00

ರಾಜ್ಯ ಸರ್ಕಾರವು ಪ್ರವಾಹ ಮತ್ತು ಬರ ಪರಿಹಾರ ಕಾರ್ಯಗಳಿಗಾಗಿ ಕೇಂದ್ರದಿಂದ ಆರ್ಥಿಕ ನೆರವು ಕೋರುವ ವಿವರವಾದ ಮನವಿಪತ್ರವನ್ನು ತಯಾರಿಸುತ್ತಿದ್ದು ಭಾರತ ಸರ್ಕಾರಕ್ಕೆ ಶೀಘ್ರದಲ್ಲಿಯೇ ಸಲ್ಲಿಸಲಾಗುವುದು.

ದಿನಾಂಕ 23.7.94 ಮತ್ತು ಪುನಃ 5.8.94, ಹೀಗೆ ಎರಡು ಬಾರಿ ವಿರೋಧ ಪಕ್ಷಗಳ ನಾಯಕರೊಂದಿಗೆ ಸಮಾಲೋಚಿಸಿರುತ್ತಾರೆ.

ಎಲ್ಲಾ ನೊಂದ ಸಂತ್ರಸ್ಥರಿಗೂ ತುರ್ತು ಪರಿಹಾರವನ್ನು ಒದಗಿಸಲಾಗಿದೆ. ಕೆಲವು ಸಮಯದಲ್ಲಿ, ಖಾಸಗಿ ಆಸ್ತಿಪಾಸ್ತಿಗಳ ಹಾನಿಗೆ ನೀಡಬೇಕಾಗಿರುವ ಪರಿಹಾರವನ್ನು ಪೂರ್ಣವಾಗಿ ವಿತರಿಸಲಾಗುವುದು. ಎಲ್ಲಾ ಅತ್ಯಗತ್ಯ ಸಾರ್ವಜನಿಕ ಆಸ್ತಿಗಳನ್ನು ತಕ್ಷಣ ದುರಸ್ಥಿಗೊಳಿಸಲಾಗುವುದು. ಪ್ರವಾಹ ಮತ್ತು ಬರದಿಂದ ನೊಂದ ಸಂತ್ರಸ್ಥರನ್ನು ಉಪಶಮನಗೊಳಿಸಲು ನಾವು ಶಕ್ತಿಮೀರಿ ಪ್ರಯತ್ನಿಸುತ್ತೇವೆ ಹಾಗೂ ಶೀಘ್ರವಾಗಿ ಬಾಧಿತ ಪ್ರದೇಶಗಳಲ್ಲಿ ಸಾಮಾನ್ಯ ಸ್ಥಿತಿ ಮರಳಲು ಯತ್ನಿಸುತ್ತೇವೆ.

ಉಪಾಧ್ಯಕ್ಷರು : ಈಗ ಖಾಸಗಿ ಸದಸ್ಯರ ನಿರ್ಣಯ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಕಂದಾಯ ಸಚಿವರು ಏನು ಸ್ಟೇಟ್ ಮೆಂಟ್ ಮಾಡಿದರು ಅದರ ಮೇಲೆ ಚರ್ಚೆ ಆಗಬೇಕಲ್ಲ. ಅದಕ್ಕೆ ಬಹಳ ಸಮಯ ಬೇಕಾಗುತ್ತದೆ. ನಿನ್ನೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಅಂಡರ್‌ಸ್ಟ್ಯಾಂಡಿಂಗ್ ಏನಾಗಿತ್ತು ಅಂದರೆ, ಸರ್ಕಾರದವರು ಏನು ಸ್ಟೇಟ್‌ಮೆಂಟ್ ಮಾಡುತ್ತಾರೆ. ಅದರ ಮೇಲೆ ಚರ್ಚೆ ಮಾಡಬೇಕು ಎಂದು. ಈ ಮುಂಜಾನೆ ಅಸೆಂಬ್ಲಿ ಬೇಡ, ಫಂಕ್ಷನ್ ಇದೆ 12 ಕ್ಕೆ ಸೇರೋಣ ಎಂದು ಆಯಿತು. ಈಗ ಸದನದಲ್ಲಿ 15 ಜನ ಸದಸ್ಯರು ಇಲ್ಲ. ಹೀಗಿರುವಾಗ ನನ್ನ ಮಾತು ಯಾರು ಕೇಳಬೇಕು? ನಾನು ಏನು ಸಲಹೆ ಮಾಡುತ್ತಿದ್ದೇನೆಂದರೆ, ಕಂದಾಯ ಸಚಿವರು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಕೆಲವು ಇವೆ, ಅವುಗಳನ್ನು ಮೂವ್ ಮಾಡಿಕೊಳ್ಳಲಿ. ಅದರ ಜೊತೆಗೆ ಖಾಸಗಿ ಸದಸ್ಯರ ನಿರ್ಣಯ ಇರುವುದರಿಂದ ಮಾನ್ಯ ವಾಟಾಳ್ ನಾಗರಾಜ್ ಅವರು ಬಂದರೆ ಮಾತನಾಡುತ್ತಾರೆ. ಸೋಮವಾರ ಪ್ರಶ್ನೋತ್ತರ ಆದಮೇಲೆ ಮಾನ್ಯ ಕಂದಾಯ ಸಚಿವರು ಏನು ಸ್ಟೇಟ್‌ಮೆಂಟ್ ಮಾಡಿದ್ದಾರೆ ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ವಿತ್ತೀಯ ಕಾರ್ಯಕಲಾಪಗಳು

1994-95ನೇ ಸಾಲಿನ ಬೇಡಿಕೆಗಳ ಮಂಡನೆ ಮತಕ್ಕೆ ಹಾಕುವುದು

ಉಪಾಧ್ಯಕ್ಷರು : ಈಗ ಬೇಡಿಕೆಗಳನ್ನು ಮಂಡಿಸುವುದು, ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು.